Mr. SPEAKER—Motion moved.

"That the Mysore Municipalities Bill, 1962 be referred to a Joint Select Committee consisting of a total number of 20 members (15 members from the Legislative Assembly and 5 members from the Legislative Council) that the concurrence of the Legislative Council be obtained therefor and that the following members of this House shall be the members of the Joint Select Committee, namely:—

Sriyuts.—

1. Y. Ramachandra
2. M. R. Pattannashetty
3. J. L. Kabadi
4. A. G. Bandi Gowda
5. M. Srinivasa Naik
6. *Smt. B. L. Subbamma*
7. T. G. Satyanarayana
8. M. C. Anjaneya Reddy
9. C. S. Hulkoti
10. K. H. Ranganath
11. B. K. Puttaiah
12. C. J. Muckannappa
13. Siddiah Kashimath
14. Ghouse Mohiuddin
15. Dr. K. S. Gowdiah

The Motion was adopted.

Mr. SPEAKER.—Under sub-clause (2) of rule 240 the Minister in charge and the Minister for Law have to be nominated as Members of the Joint Select Committee and I, accordingly nominate them.

MYSORE GIFT GOODS (UNLAWFUL POSSESSION) BILL, 1963.

Moion to consider.

Sri S. R. KANTHI (Minister for Education).—Sir, I beg to move:

"That the Mysore Gift Goods (Unlawful Possession) Bill, 1963 be taken into consideration.

Mr. SPEAKER.—Motion moved:

"That the Mysore Gift Goods (Unlawful Possession) Bill, 1963, be taken into consideration."

† **Sri S. R. KANTHI.**—Sir, this is a very simple measure. We are getting lot of help from the Care Organisation for the benefit of the children of the State. It is possible that these goods may fall into the hands of some other people for wrongful use. In order to prevent such a thing, this Bill has been brought. Similar measures have been passed in the States of Madras and Kerala and this Bill is on the same model as that of Madras. Since it is a simple Bill, I hope it may not take much time for the consideration of the House.

Sri S. SIVAPPA.—Sir, may I know the quantity of corn-meal, milk powder, butter, etc., received by the State from various organisations?

Sri S. R. KANTHI.—Sir, at present we are going to get from the CARE Organisation and they have promised to give us enough provision for five lakhs of children for the year' 1963–64. Sir, the cost of the whole lot might be a crore of rupees.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಗಳೇ, ಮಾನ್ಯ ವಿದ್ಯಾಮಂತ್ರಿಗಳು ಮಂಡಿಸಿರತಕ್ಕ Mysore Gift Goods (unlawful possession) Bill, 1963ನಲ್ಲಿ ಅಡಗಿರತಕ್ಕ ತತ್ವವೇನೋ ಬಹಳ ಒಳ್ಳೆಯದಾಗಿದೆ. ಮಕ್ಕಳ ಆರೋಗ್ಯಕ್ಕಾಗಿ ಮಕ್ಕಳಿಗೆ ಬೇಕಾಗುವ ಆಹಾರ ಪದಾರ್ಥಗಳು ಪ್ರಪಂಚದ ಅನೇಕ ಸಂಸ್ಥೆಗಳಿಂದ ಕೊಡುಗೆಯಾಗಿ ಕೊಡತಕ್ಕದ್ದು ನಮ್ಮ ದೇಶದಲ್ಲಿ ಸದುಪಯೋಗಕ್ಕೆ ಅವಕಾಶವಿಲ್ಲದಂತೆಯೂ ಮತ್ತು ಮಧ್ಯವರ್ತಿಗಳಿಂದ ಯಾವ ತೊಂದರೆಯೂ ಆಗದಂತೆ ವ್ಯವಸ್ಥೆ ಮಾಡಿ ಯಾರಿಗೆ ನಿಜವಾದ ಪ್ರಯೋಜನ ದೊರಕಬೇಕಾಗಿದೆಯೋ ಅವರಿಗೆ ದೊರಕಲು ಅನುಕೂಲವಾಗುವಂತೆ ಇವೊತ್ತಿನ ದಿವಸ ಇಂತಹ ಒಂದು ಕಾನೂನನ್ನು ಮಾಡಬೇಕಾದ ಪರಿಸ್ಥಿತಿ ಬಂದಿದೆ ಎಂದು ಹೇಳಿದ್ದಾರೆ. ನಿಜವಾಗಿಯೂ ಇದು ಅಭಿನಂದನಾರ್ಹವಾದುದು. ನಮ್ಮ ದೇಶದಲ್ಲಿ ಇದಕ್ಕೆ ಕೂಡ ಒಂದು ಕಾನೂನನ್ನು ಕರತಕ್ಕದ್ದು ವಿಶೇಷವಾಗಿ ಅವಶ್ಯಕವಾಗಿದೆ. ಇದಕ್ಕೆ ಅನೇಕ ಕಾರಣಗಳೂ ಇವೆ. ಪ್ರಪಂಚ ಸಂಸ್ಥೆಯವರು ಬಹಳ ಒಳ್ಳೆಯ ಉದ್ದೇಶಕ್ಕಾಗಿ ಕೊಡುತ್ತಿರುವ ಈ ಸಹಾಯ ಭಾರತ ದೇಶದಲ್ಲಿ ಒಂದು ಮಾರಾಟ ಮಾಡಕ್ಕವಸ್ತುವಾಗಿ ಬಹಳ ಸ್ಫೂರ್ತಿಯುತವಾಗಿ ಈ ಕಾರ್ಯ ನಡೆಯುತ್ತಿದೆ. ನಾನು ಒಂದು ಕತೆ ಹೇಳಿದೆ. ಪ್ರವಾಸ ಹೋಗಿದ್ದಾಗ ಮಿಲ್ಕ್ ಪೌಡರನ್ನು ಉಚಿತವಾಗಿ ಹಂಚಲು ಯಾವುದೋ ಒಂದು ಪಾರ್ಕಿಟಿಂಗ್ ಸೊಸೈಟಿಗೆ ಕೊಡಲಾಗಿತ್ತೆಂದೂ, ಆ ಪೌಡರನ್ನು ಸ್ಥಳೀಯ ಬಹಳ ದೊಡ್ಡ ಮುಖಂಡರೊಬ್ಬರು ತಮ್ಮ ಮನೆಯಲ್ಲಿ ಒಂದು ಒಳ್ಳೆ ಕಾರ್ಯಕ್ಕಾಗಿ ಉಪಯೋಗಿಸಿಕೊಂಡರು ಯಾರಿಗೂ ಹಂಚಲಿಲ್ಲ ಎಂಬುದಾಗಿ ಶುದ್ಧಿ ನನ್ನ ಕಿವಿಗೆ ಬಿದ್ದಿತ್ತು. ಒಬ್ಬ ದೊಡ್ಡ ಪ್ರಭಾವಶಾಲಿಗಳಾದ ಮುಖಂಡರು ಈ ರೀತಿ ದುರುಪಯೋಗ ಮಾಡುವುದಕ್ಕೆ ಪ್ರಯತ್ನಿಸಿದರೆ ಇವರಮೇಲೆ ಒಂದು ಕಡಿತ ಮಾಡಲು ಹೇಗೆ ಸಾಧ್ಯ? ಆ ಹಾಲನ ಪುಡಿಯೆನ್ನು ಏಕಪ್ರಕಾರವಾಗಿ ಉಪಯೋಗಿಸಿ ಉಪಯೋಗಿಸಿಕೊಂಡಿದ್ದವರು ಅಗಿನ ಒಬ್ಬ ಮಾನ್ಯ ಮಂತ್ರಿಗಳಾಗಿದ್ದರು, ನಾನು ಅವರ ಕ್ಷೇತ್ರಕ್ಕೆ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯ ಅಧ್ಯಕ್ಷನಾಗಿ ಪ್ರವಾಸಕ್ಕೆ ಹೋಗಿದ್ದಾಗ ಈ ವಿಚಾರದಲ್ಲಿ ಆಗ ಹೆಚ್ಚು ವಿಸ್ತರಣೆ ಕೊಟ್ಟು ಹೇಳಿದ್ದೇನೆ.

ಇನ್ನೊಂದು ವಿಚಾರ ಇದೆ ಇದರಲ್ಲಿ. ಎಲ್ಲ ಹೋಟೆಲ್ಲಿನಲ್ಲಿಯೂ ಈಗ ಮಿಲ್ಕ್ ಪೌಡರ್‌ನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದಾರೆ. ಇದರಿಂದ ಹೋಟಲಿನ ಮಾಲೀಕರುಗಳಿಗೆ ಹಾಲಿನ ಪುಡಿಯು ಹೆಚ್ಚಿಗೆ ಸಿಕ್ಕಿ ಇದರಿಂದ ಹೆಚ್ಚಿನ ಲಾಭ ಸಂಪಾದನೆ ಮಾಡುತ್ತಿದ್ದಾರೆ ಇದು ನ್ಯಾಯವಾದ್ದಲ್ಲ ಸರಕಾರ ಈ ಕಾನೂನು ಮಾಡಿರುವುದು ಇಂಥ ದುರುಪಯೋಗವನ್ನು ತಪ್ಪಿಸಬೇಕು ಎಂದು. ಈ ಉದ್ದೇಶ ಬಹಳ ಒಳ್ಳೆಯದು. ನಮ್ಮ ದೇಶದಲ್ಲಿ ಮೊದಲೇ ಮಕ್ಕಳ ಆರೋಗ್ಯ ಬಹಳ ಕಡಿಮೆ. ಅವರ ಆರೋಗ್ಯವನ್ನು ಉತ್ತಮ ಪಡಿಸುವುದಕ್ಕಾಗಿ Milk powder, Corn Meal ಇತ್ಯಾದಿ ಆಹಾರ ಪದಾರ್ಥಗಳನ್ನು ಹೊರದೇಶದವರು ಕೊಡುತ್ತಾರೆ. ಅದು ಸದುಪಯೋಗವಾಗಲಿ ಎನ್ನುವ ಉದ್ದೇಶದಿಂದ ಈ ಕಾನೂನನ್ನು ತಂದಿದ್ದೇವೆಂದು ಹೇಳುತ್ತಾರೆ. ಆದರೆ ಕಾನೂನನ್ನು ತಂದಾಕ್ಷಣ ಇದೆಲ್ಲ ತಪ್ಪಿ ಹೋಗುತ್ತದೆಂದು ಅವರು ತಿಳಿದುಕೊಂಡಿದ್ದಾರೆ ಅದು ಅವರ ಒಂದು ಭ್ರಮೆ. ಏಕೆಂದರೆ ಕಾನೂನಿನ ಕೆಳಗೆ ನುಗ್ಗುವವರನೇಕರಿದ್ದಾರೆ. ಆದ್ದರಿಂದ ಈ ಕಾನೂನು ಸರಿಯಾಗಿ ಜಾರಿಯಾಗಬೇಕು.

(ಶ್ರೀ ಎಸ್. ಶಿವಪ್ಪ)

ಈ ಮಸೂದೆಯ ಉದ್ದೇಶ ಒಳ್ಳೆಯದಾಗಿದೆ. ನಮ್ಮ ಮಕ್ಕಳು ಚೆನ್ನಾಗಿ ಬೆಳೆಯಬೇಕು ಆಹಾರದ ಕೊರತೆಯಿದೆ ಎಂಬು ಅಮೇರಿಕಾ ದೇಶವು ಅಲ್ಲಿಂದ ಇಲ್ಲಿಗೆ ಆಹಾರ ಪದಾರ್ಥ ಕಳಿಸುತ್ತಿದ್ದಾರೆ. ಆದರೆ, ಮಕ್ಕಳ ಆರೋಗ್ಯ ರಕ್ಷಣೆಗೆ ನಮ್ಮ ಸರಕಾರ ಏನು ವ್ಯವಸ್ಥೆ ಮಾಡಿದ್ದಾರೆ? ಸಮಾಜವಾದಿ ಸಮಾಜ ರಚನೆ ಮಾಡುತ್ತೇವೆ, ಸುಖೀ ರಾಜ್ಯ ಸ್ಥಾಪನೆ ಮಾಡುತ್ತೇವೆಂದು ಹೇಳುತ್ತಿರುವ ಸರಕಾರ, ಭಾವೀ ಪ್ರಜೆಗಳಾದ ಮಕ್ಕಳ ಆರೋಗ್ಯ ರಕ್ಷಣೆಗೆ ಗಮನ ಕೊಟ್ಟಿಲ್ಲ. ಇದೊಂದು ಪ್ರಾಮುಖ್ಯ ವಿಷಯ. ದೇಶ ಉದ್ಧಾರ ಮಾಡುವ ಶಕ್ತಿ ಮಕ್ಕಳಿಗೆ ಇಲ್ಲ. ಅವರ ಆರೋಗ್ಯ ಕೆಟ್ಟು ಹೋಗಿದೆ. ಮುಂದಿನ ನಮ್ಮ ದೇಶದ ಪ್ರಜೆಗಳಲ್ಲಿ ಅಂಥ ಶಕ್ತಿಯಿಲ್ಲ. ಆದುದರಿಂದ ನಮ್ಮ ಸರಕಾರ ಇದಕ್ಕೆ ಹೆಚ್ಚು ಗಮನಕೊಟ್ಟು ಮಕ್ಕಳು ಚೆನ್ನಾಗಿ ಆರೋಗ್ಯವಂತರಾಗಿ ಬೆಳೆಯುವ ಹಾಗೆ ಆಹಾರ ಪದಾರ್ಥ ಒದಗಿಸುವ ವ್ಯವಸ್ಥೆ ಮಾಡಬೇಕು ಎಂದು ಹೇಳಿ ಈ ಮಸೂದೆಯಲ್ಲಿಯ ತತ್ವವನ್ನು ಅಂಗೀಕರಿಸುತ್ತೇನೆ.

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಸ್ವಾಮಿ, ನಮ್ಮ ಪಕ್ಷದ ನಾಯಕರಾದ ಶ್ರೀ ಶಿವಪ್ಪನವರು ಈಗ ತಾನೆ ಮಾತನಾಡಿ ಅನೇಕ ವಿಷಯಗಳನ್ನು ವಿವರವಾಗಿ ಹೇಳಿದ್ದಾರೆ. ನಾನಾದರೂ ಕೂಡ ಈ ಮಸೂದೆಯನ್ನು ಸ್ವಾಗತಿಸುತ್ತಾ ವಿದ್ಯಾ ಇಲಾಖೆಗೆ ಸಂಬಂಧಪಟ್ಟ ಹಾಗೆ ಈ ಮಸೂದೆ ತರುವುದಕ್ಕೆ ಮೊದಲು ಪರಿಸ್ಥಿತಿ ಹೇಗಿದೆ, ದರ ಹೆನ್ನೆರೆ ಏನು, ಈ ಮಸೂದೆಯನ್ನು ಏತಕ್ಕೆ ತಂದಿದ್ದಾರೆ ಎನ್ನುವುದನ್ನು ಈ ಸಭೆಗೆ ಹೇಳಲು ಪ್ರಯತ್ನ ಮಾಡುತ್ತೇನೆ. ಅನೇಕ ದೇಶಗಳಿಂದ ಬಂದ ಮಿಲ್ಕ್ ಪೌಡರ್, ತಿಂಡಿ ತಿನಿಸುಗಳನ್ನು ಹುಡುಗರಿಗೆ ವಿದ್ಯಾ ಇಲಾಖೆಯ ಮುಖಾಂತರ ಹಂಚಲಾಗುತ್ತಿದೆ. ನಮ್ಮ ದೇಶದಲ್ಲಿ ಮಕ್ಕಳು ಆರೋಗ್ಯವಂತರಾಗಿ ಬೆಳೆಯಬೇಕು ಎಂಬ ನಮದ್ದೇ ಶದಿಂದ ಅನೇಕ ಪಾಶ್ಚಿಮಾತ್ಯ ದೇಶಗಳು ಈ ಸಹಾಯಗಳನ್ನು ಕಳಿಸುತ್ತಿದ್ದಾರೆ. ಆದರೆ, ನನಗೆ ತಿಳಿದಮಟ್ಟಿಗೆ ಈ ದೇಶದಲ್ಲಿ ಮಿಲ್ಕ್ ಪೌಡರ್ ಯೋಪಾಗಲೂ ಕೂಡ ವಿದ್ಯಾರ್ಥಿಗಳಿಗೆ ಹಂಚಿಲ್ಲ ಎಂಬುದಕ್ಕೆ ವಿಷಾದ ಪಡಬೇಕಾಗಿದೆ ವಿದ್ಯಾರ್ಥಿಗಳಿಗೆ ಹಂಚುವದಕ್ಕಾಗಿ ಕೊಟ್ಟಿರುವ ಹಾಲನ ಪೌಡರ್ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಈ ದೃಷ್ಟಿಯಿಂದ 15 ವರ್ಷಗಳಾದ ಮೇಲೆ ಇಂಥ ಮಸೂದೆ ತರುವ ಬುದ್ಧಿ ಸರ್ಕಾರಕ್ಕೆ ಬಂದಿತಲ್ಲಾ ಎಂದು ಕನಿಕರದಿಂದ ಈ ಮಸೂದೆಯನ್ನು ಸ್ವಾಗತಿಸಬೇಕಾಗಿದೆ. ಈ ವಿಚಾರದಲ್ಲಿ ಮಂತ್ರಿಗಳಿಗೆ ನಾಲ್ಕು ಮಾತು ಹೇಳಲು ಇಚ್ಛಿಸುತ್ತೇನೆ.

Mr. SPEAKER.—There is no provision for that under any clause of the Bill. The Hon'ble Member will have to deal with the merits of the Bill.

ಶ್ರೀ ಕೆ. ಲಕ್ಕಪ್ಪ.—ಈ ಬಿಲ್ಲನ್ನು ಅನುಮೋದನೆ ಮಾಡುವದಕ್ಕೆ ಮೊದಲು ಈ ಇರಾಖೆಯಲ್ಲಿ ಆಗತಕ್ಕಂಥ ಅನ್ಯಾಯ, ಮಿಲ್ಕ್ ಪೌಡರ್ ದುರುಪಯೋಗಪಡಿಸಿಕೊಳ್ಳುವುದು ಯಾರು ಮಾಡುತ್ತಿದ್ದಾರೆಯೋ ಅಂಥವರಿಗೆ ನಿಜವಾಗಿಯೂ ಶಿಕ್ಷೆ ವಿಧಿಸಬೇಕು. ಧರ್ಮ, ನೀತಿಯಿಂದಲೂ ಈ ರೀತಿ ಶಿಕ್ಷೆ ವಿಧಿಸುವುದು ಸಾಧುವಾದುದು. ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ತುಮಕೂರು ಜಿಲ್ಲೆಯ ಹೆಬ್ಬೂರು ಗ್ರಾಮದಲ್ಲಿ ಒಂದು ಪ್ರೈವೇಟ್ ಹೈಸ್ಕೂಲು ಇದೆ. ಅವರಿಗೆ ಒಂದು ಬಸ್ ಲೈಸೆನ್ಸ್ ಕೊಟ್ಟಿದ್ದಾರೆ. ಅಲ್ಲಿ ಗೃಹಪತಿ ಹಾಸ್ಟೆಲ್ ಎಂದಿದೆ. ಈ ಬಸ್ ಸರ್ವಿಸ್‌ನಿಂದ ಬರುವ ಉತ್ಪತ್ತಿ ಹೈಸ್ಕೂಲಿಗೆ ಕೊಡುತ್ತಾರೆ. ಈ ಹಾಸ್ಟೆಲ್ಲಿನಲ್ಲಿರುವ ವಿದ್ಯಾರ್ಥಿಗಳಿಗೆ ಹಂಚುವದಕ್ಕಾಗಿ ಮಿಲ್ಕ್ ಪೌಡರ್ ಡಬ್ಬಾ ಕೊಡುತ್ತಿದ್ದಾರೆ. ಇದು ಕಂದಾಯ ಮಂತ್ರಿಗಳಿಗೆ ಗೊತ್ತಿದೆ. ಆದರೆ ಅದರ ಬಗ್ಗೆ ಈ ಸಭೆಯಲ್ಲಿ ಹೇಳುವದಕ್ಕೆ ಅವರು ತಯಾರಾಗುವದಿಲ್ಲ. ಈ ಹೈಸ್ಕೂಲಿಗೆ ದೊರೆಯುವ ಮಿಲ್ಕ್ ಪೌಡರ್ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಇದನ್ನು ಮಂತ್ರಿಗಳು ಯೋಚನೆಮಾಡಬೇಕು ಅಲ್ಲಿ ಬಹಳ ಅನ್ಯಾಯ ನಡೆಯುತ್ತಿದೆ. ದುರುಪಯೋಗ ಪಡಿಸಿಕೊಂಡವರಿಗೆ ಶಿಕ್ಷೆ ವಿಧಿಸಲು ಬರುವ ಹಾಗೆ ಈ ಕಾನೂನಿನಲ್ಲಿ retrospective effect ಕೊಡಬೇಕೆಂದು ಹೇಳುತ್ತೇನೆ.

Mr SPEAKER—Is it possible to create an offence giving it retrospective effect?

ಶ್ರೀ ಕೆ. ಲಕ್ಕಪ್ಪ.—ಈ ಮಸೂದೆ ಜಾರಿಗೆ ಬಂದಮೇಲೆ ಮಾಡಿದರೆ ಏನ ಪ್ರಯೋಜನ? Retrospective effect ಕೊಟ್ಟರೆ ಕಳ್ಳರು ಸಿಕ್ಕುತ್ತಾರೆ ವಿದ್ಯಾರ್ಥಿಗಳಿಗೆ ದ್ರೋಹಮಾಡಿ, ಮಿಲ್ಕ್ ಪೌಡರ್ ಮಾರಿಕೊಂಡು ಜೀವನ ಮಾಡುತ್ತಿದ್ದಾರೆ. ಬಸ್ ಆದಾಯವನ್ನು ತಾವೇ ಉಪಯೋಗಮಾಡಿಕೊಳ್ಳುತ್ತಿದಾರೆ. ವಿದ್ಯಾಸಂಸ್ಥೆಗಳಲ್ಲಿ ದೇಶದ್ರೋಹ ಮಾಡಕಕ್ಕಂಥ ಜನರಿಗೆ ಶಿಕ್ಷೆಯಾಗಬೇಕು. ಇಂಥ ಕಳ್ಳರನ್ನು ಹಿಡಿಯುವವರು ಯಾರು? ಯಾವಾಗ ಅಂಥ ಅಧಿಕಾರ ಕೊಟ್ಟಿದ್ದಾರೆ? ಆದುದರಿಂದ ಇದನ್ನು retrospective effect ಕೊಟ್ಟರೆ ಅನೇಕ ಕಳ್ಳರು ಸಿಕ್ಕುತ್ತಾರೆ. ಈ ರೀತಿ ಮಾಡಿದರೆ

ನಿಜವಾಗಿಯೂ ಅನೇಕ ಜನ ಸಿಕ್ಕುತ್ತಾರೆ. ವಿದ್ಯಾ ಇಲಾಖೆಯ ಮಂತ್ರಿಗಳಿಗೆ ಈ ಸಲಹೆ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಅಂಗಡಿ ಚನ್ನಬಸಪ್ಪ.—ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ಮೊದಲಿನಿಂದ ಕೊನೆಯ ವರೆಗೆ ಓದಿ ನೋಡಿದರೆ ಇದರ ಅವಶ್ಯಕತೆಯು ಏನು ಎಂಬುದು ಕಾಣಲಿಲ್ಲ. ಯಾಕಂದರೆ ಇಂಡಿಯನ್ ಪೀನಲ್ ಕೋಡ್ ಸೆಕ್ಷನ್ 406 ಅಥವಾ 409ರ ಪ್ರಕಾರ ಈ ತಕ್ಕೀರುಗಳು ಅದರ ವ್ಯಾಪ್ತಿಯಿರುತ್ತವೆ. ಅದರಲ್ಲಿ ಈ ರೀತಿಯಿದೆ—If the property is utilised for any other purpose other than the purpose for which it is meant....." ಈ ಪ್ರಕಾರ ಮಾಡಿದರೆ misappropriation case ಹಾಕಬಹುದು.

ಆದರೆ ಏನಾಗಿದೆಯೆಂದರೆ ಇವರು ಸೆಕ್ಷನ್ 406 ಉಪಯೋಗ ಮಾಡಿಲ್ಲ; ಸೆಕ್ಷನ್ 409 ಉಪಯೋಗ ಮಾಡಿಲ್ಲ. ಮಿಸ್‌ಅಪ್ರೊಪ್ರಿಯೇಷನ್, ಮಿಸ್‌ಅಪ್ಲಿಕೇಷನ್ ಅನೇಕ ದಿನಗಳ್ಳಿಯಿಂದ ನಡೆಯುತ್ತಾ ಬಂದಿದೆ. ಪರದೇಶದಿಂದ ಮಕ್ಕಳಿಗಾಗಿ ದಾನವಾಗಿ ಬಂದಿರತಕ್ಕ ವಸ್ತುಗಳನ್ನು ದುರುಪಯೋಗ ಪಡಿಸಿಕೊಂಡು, ಪರದೇಶದವರ ಕಣ್ಣಿನಲ್ಲಿ ನಾವು ಒಂದು ತರಹ ಅವಮಾನಕ್ಕೆ ಈಡಾಗುವ ಪರಿಸ್ಥಿತಿ ಬಂದಿದೆ. ಈ ದುರುಪಯೋಗ ಮಾಡುವುದನ್ನು ನಿಲ್ಲಿಸಲು ಹೊಸದಾಗಿ ಈ ಕಾನೂನನ್ನು ಸರ್ಕಾರದವರು ತಂದಿರುತ್ತಾರೆ. ಇದನ್ನು ಸ್ವಾಗತ ಮಾಡಲಿಕ್ಕೆ ಬಯಸುತ್ತೇವೆ. ನಾನೂ ಒಂದೆರಡು ಇನ್ಸ್‌ಟ್ಯೂಷನ್ನುಗಳನ್ನು ನಡೆಸುತ್ತಾ ಇದ್ದೇನೆ. ಈ ಇನ್ಸ್‌ಟ್ಯೂಷನ್ನುಗಳಿಗೆ ಅಮೇರಿಕದಿಂದ ಬಟರ್‌ಮಿಲ್ಕ್, ಮಿಲ್ಕ್ ಪೌಡರು ಬರುತ್ತಾ ಇದೆ. ಆದರೆ ನಾವು ಅವುಗಳನ್ನು ಡೈರೆಕ್ಟಾಗಿ ಪಡೆಯದೆ, ಕೆಲವು ಮಿಲ್ಕ್ ಮಿಷನರಿಗಳ ಮುಖಾಂತರ ಪಡೆಯುತ್ತಾ ಇದ್ದೇವೆ. ಈಗ ಸೆಕ್ಷನ್ 2ರಲ್ಲಿ

"In this Act, unless the context otherwise requires.—

(1) "gift goods" means any of the following goods namely.—

(*a*) corn-meal;
(*b*) Milk powder;
(*c*) vegetable oil (soya bean oil or sunflowerseed oil);
(*d*) butter;
(*e*) ghee;

supplied by way of gift, by any relief organisation to say State Government or the Central Government or to any other person on behalf of such Government."

5-00 P.M.

ಅಂತ ಇದೆ. ಈಗ ಯಾವುದಾದರೂ ಒಂದು ಸಂಘ ಅಥವಾ ಒಬ್ಬ ಮನುಷ್ಯ ಇಂಥ ಸಾಮಾನುಗಳನ್ನು ಪರದೇಶದಿಂದ ಡೈರೆಕ್ಟಾಗಿ ಪಡೆದರೆ, ಈ ಕಾಯಿದೆಯ ಪ್ರಕಾರ ಕೇನು ಹಾಕಲಿಕ್ಕೆ ಬರುವುದಿಲ್ಲ. ದೇಶವಲ್ಲರತಕಂಥ ಯಾವ ಸಂಸ್ಥೆಯೇ ಇರಲಿ, ಇಂಡಿವಿಜುಯಲ್ ಮನುಷ್ಯನೇ ಇರಲಿ, ಪರದೇಶದಿಂದ ಈ ಸಾಮಾನುಗಳನ್ನು ಯಾವ ಉದ್ದೇಶಕ್ಕಾಗಿ ಪಡೆಯುತ್ತಾನೆಯೋ, ಅವುಗಳನ್ನು ಧಾನಧರ್ಮ ಮಾಡುವ ಉದ್ದೇಶಕ್ಕಾಗಿ ಪಡೆಯುತ್ತಾನೆಯೋ ಆ ಉದ್ದೇಶಕ್ಕೆ ಇಂಥ ಮಾಲುಗಳನ್ನು ಉಪಯೋಗಿಸದೆ ಕಾನೂನು ಉಲ್ಲಂಘಿಸಿದರೆ ಅಂಥ ಅಪರಾಧ ಮಾತ್ರ ಶಿಕ್ಷಾರ್ಹ ಎಂದು ಈ ಕಾನೂನಿನಲ್ಲಿ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ನನಗೆ ಈ ಕಾನೂನಿನಿಂದ ತಿಳಿದ ಮಟ್ಟಿಗೆ ಬರಿ ಸರ್ಕಾರ ಅಥವಾ ಸರ್ಕಾರದ ಏಜಂಟು ಅಥವ ಸರ್ಕಾರದ ಪರವಾದ ವ್ಯಕ್ತಿ ಸಂಸ್ಥೆ ಮಿಲ್ಕ್ ಪೌಡರು, ಬಟರು ಇತ್ಯಾದಿ ಸಾಮಾನುಗಳನ್ನು ಪಡೆಯುತ್ತಾ ಇದ್ದರೆ, ಆವಾಗ ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬಹುದು, ವ್ಯಕ್ತಿಗಳು ಪಡೆಯುತ್ತಿದ್ದರೆ ಕಾಯಿದೆಯಲ್ಲಿ ಬರುವುದಿಲ್ಲ, ಅವರು ಸುಲಭವಾಗಿ ತಪ್ಪಿಸಿಕೊಂಡು ಬಿಡುತ್ತಾರೆ. ಈ ಕಾಯಿದೆಯ ಪ್ರಕಾರದ ಅಪೆನ್ಸುಗಳು ಕಾಗ್ನಿಸೆನ್ಸ್ ಬಗ್ಗೆ ಇದ್ದರೂ, ಈ ಸಾಮಾನುಗಳು ದುರುಪಯೋಗವನ್ನು ತಡೆಗಟ್ಟಲು ಕಾನೂನಿನಲ್ಲಿ ದೋಷವಿದೆ. ಈ ಸೆಕ್ಷನ್ 3 ಅಷ್ಟೊಂದು ಸರಿಯಾಗಿಲ್ಲ. ಸೆಕ್ಷನ್ 409ರ ಪ್ರಕಾರ ಸರ್ಕಾರಿ ನೌಕರರು ಮಾಡಿದರೂ ಶಿಕ್ಷೆಗೆ ಒಳಗಾಗುತ್ತಾರೆ, ಸೆಕ್ಷನ್ 406 ರ ಪ್ರಕಾರ ಬೇರೆಯವರು ಮಾಡಿದರೆ ಶಿಕ್ಷೆಗೆ ಗುರಿಯಾಗುತ್ತಾರೆ. ಅದೇ ರೀತಿಯಲ್ಲಿ ಇಲ್ಲಿ ಮಾಡಿಲ್ಲ. ನಾವು ಸೆಕ್ಷನ್ 3 ಇಂಪ್ರೂವ್ ಮಾಡುವ ಹಾಗಿದೆ.

(ಶ್ರೀ ಅಂಗಡಿ ಚನ್ನಬಸಪ್ಪ)

"Penalty for unlawful possession of gift goods.—

If any person is found, or is proved to have been, in possession of any gift goods reasonably suspected of being stolen or unlawfuly obtained, and cannot account satisafactorily how he came by the same....."

ಆದರೆ ನೀವು mode of distributionಗೆ ರೂಲ್ಸ್ ಮಾಡಿಲ್ಲ, ಸೆಕ್ಷನ್ ಪ್ರೊವೈಡೆ ಮಾಡಿಲ್ಲ, gift goods ಬಂದಿರತಕ್ಕಂಥಾದ್ದನ್ನು ಯಾವುದಾದರೂ ಒಂದು ರೀತಿಯಿಂದ ಹಂಚಬೇಕು ಎಂದು ನಿಯಮವಿದೆ. ಹಾಗೆ ಸೆಕ್ಷನ್ ಇದ್ದರೆ ಹಂಚುವುದರಲ್ಲಿ ಒಬ ಮನುಷ್ಯ ಅತಿಕ್ರಮಣ ಮಾಡಿ ವರ್ತನೆ ಮಾಡಿದರೆ ಅವನು ಆ ಸೆಕ್ಷನ್ನಿನಲ್ಲಿ ಬರುತ್ತಾನೆ, ಸರ್ಕಾರ rule making power ಇಟ್ಟುಕೊಂಡು ಇಂಥ ರೂಲ್ಸ್ ಪ್ರಕಾರ, gift goods ಈ ರೀತಿ ಡಿಸ್ಟ್ರಿಬ್ಯೂಟ್ ಆಗಬೇಕು ಎಂದು ಹೇಳಬೇಕು, ಆವಾಗ ನಾವು ಕೋರ್ಟಿಗೆ ಹೋದರೆ, ಹಾಗೆ ಮಾಡಿದ್ದಕ್ಕೆ, ಅಪ ರಾಧವಾಗುತ್ತದೆ. ಆದ್ದರಿಂದ ಈ ನನ್ನ ಸಲಹೆಯನ್ನು ರೂಲ್ ಮೇಕಿಂಗ್ ಪವರಿನ ಯಾದರೂ ಪೂರ್ತಿಕೆ ಮಾಡಬೇಕು, ಇಲ್ಲದೆ ಹೋದರೆ ಈ ಕಾಯಿದೆಯಲ್ಲಿಯೇ ಒಂದು ಸೆಕ್ಷನ್ನಿನಲ್ಲಿ mode of distribution ವಿವರಿಸಿ ಅದನ್ನು provide ಮಾಡಬೇಕು.

ಪರದೇಶದಿಂದ ಸಣ್ಣಪುಟ್ಟ ಮಕ್ಕಳಿಗಾಗಿ ಪಡೆದಿರತಕ್ಕಂಥ ಮಾನ್ನು ನಮ್ಮ ದೇಶದವರು ದುರುಪಯೋಗ ಪಡಿಸಿಕೊಳ್ಳುವುದು ಮಹಾಪರಾಧ. ಇವುಗಳನ್ನು ಅನಾಥ ಮಕ್ಕಳಿಗೆ, ಮತ್ತು ಚಿಕ್ಕ ಬಾಲಕ ರಿಗೆ ಉಪಯೋಗ ಮಾಡುತ್ತಾರೆ. ನನ್ನ ಅಭಿಪ್ರಾಯದ ಪ್ರಕಾರ ಈ ಪುಡ್ಡಿನ ಅಡ್ಮಿನಿಸ್ಟ್ರೇಷನ್, ಹೀನಸ್ ಕ್ರೈಮಿನಲ್ಲಿ ಬರುತ್ತದೆ. ಆದ್ದರಿಂದ ಸೆಕ್ಷನ್ 3ರಲ್ಲಿ "on conviction be punished with" or ಅ ತ ಇರುವುದನ್ನು ಬದಲಾಯಿಸಿ, be punished with imprisonment and with fine ಎಂದು ಇರಬೇಕು. ಇಂಥ ಘೋರವಾದ ಅಪರಾಧವನ್ನು ಒಬ್ಬ ಮನುಷ್ಯ ಮಾಡಿದರೆ, ಬರೀ ಜುರ್ಮಾನೆ ಸಾಲದು. ಈ ಹೀನವಾದ ಉಗ್ರವಾದ ಅಪರಾಧದ ದೃಷ್ಟಿಯಿಂದ, on conviction shall be punished with imprisonment and with fine, ಎಂದು ಎರಡೂ ಕಡ್ಡಾಯವಾಗಿ ಮೇಜಿಸ್ಟ್ರೇಟ ವಿಧಿಸುವ ಹಾಗಿರಬೇಕು.

ಶ್ರೀ ಎಸ್. ಆರ್. ಕಂಠಿ.—ಸೆಕ್ಷನ್ನಿನ ಕಡೆಯಲ್ಲಿ with both ಎಂದು ಇದೆ.

Sri ANGADI CHANNABASAPPA.—It is left to the discretion of the Magistrate. ಮೆ ಜಿಸ್ಟ್ರೇಟು ಬರೀ ಒಂದು ಫೈನು ಹಾಕಿದರೆ, that order will not be illegal.

ಶ್ರೀ ಎಸ್. ಆರ್. ಕಂಠಿ.—ಕೆಡೇ ವಚನದ ಪ್ರಕಾರ, imprisonment, fine ಎರಡೂ ಆಗಬೇಕು.

Sri ANGADI CHANNABASAPPA.—You must compel the Magistrate.

Mr. SPEAKER.—The suggestion is that it should always be a part of the conviction, namely, imprisonment. Mere fine will not do. What he says is, do not give the option to the Magistrate.

ಶ್ರೀ ಟಿ. ಎ. ಮಾದ ಗೌಡ.—ಈ ಸಭೆಯಲ್ಲಿ ವ್ಯಕ್ತಪಡಿಸಲಾಗುವ ಅಭಿಪ್ರಾಯಗಳು ಪತ್ರಿಕೆಗಳಲ್ಲಿ ಬರುತ್ತವೆ. ಗಿಫ್ಟ್ ಗುಡ್ಸ್ ಯಾರಾದರೂ ದುರುಪಯೋಗ ಪಡಿಸಿಕೊಂಡರೆ ಅವರನ್ನು ಶಿಕ್ಷೆ ಮಾಡಲು ಈ ಮನುಬೆಯನ್ನ ತಂದಿರುತ್ತಾರೆ. ಆ ಸದುದ್ದೇಶವನ್ನು ತಿಳಿದುಕೊಳ್ಳದೆ ಈ ಸಂದರ್ಭದಲ್ಲಿ ನಮ್ಮಲ್ಲರತಕ್ಕಂಥ ದೋಷಗಳನ್ನು ಹಿಡಿಯತಕ್ಕಂಥದ್ದು ಸರಿಯಲ್ಲ. ಈಗ ಗುತ್ತಿರುವ ಅಕ್ರಮಗಳನ್ನು ತಡೆಗಟ್ಟುವುದು ಸೂಕ್ತ. ಈಗ ಅಗಿರತಕ್ಕ ಚರ್ಚೆ ಸಾಕು ಇದನ್ನು ನಮಾಪ್ತಿ ಮಾಡಬೇಕು.

ಶ್ರೀ ಕೆ. ಹಿ. ರೇವಣ್ಣಸಿದ್ಧಪ್ಪ.—ಹೌದು, ಆದೆಲ್ಲಾ ಗೊತ್ತಾದರೆ ಕೊಡೋರು ಕೊಡದೆ ಹೋದರ . ನನ್ನ ದೃಷ್ಟಿಯಿಂದ ಈ ಮಸ ದೆಯಾದರೂ ನುಂದೆಯೂ ಹೇಗೆ ದುರುಪಯೋಗ ಮುಂದು ವರೆಯಬಹುದೆಂಬುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಆದ್ದರಿಂದ ಚರ್ಚೆಗೆ ಇನ್ನೂ ಕಾಲಾವಕಾಶವಿರಬೇಕು.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ನಮ್ಮ ಹಳ್ಳಿ ಕಡೆ ಒಂದು ಗಾದೆ ಇದೆ. ಅದೇನೆಂದರೆ ಕತ್ತರಿ ಇರುವ ಬದಲು ಗುರಾಣಿ ಇದ್ದರೆ ಏನೇನೊ ಮಾಡುತ್ತಾ ಇದ್ದೆ ಎಂದು. ಇರುವುದನ್ನೇ ಮಾಡುವುದಕ್ಕೆ ಆಗದೆ, ಇವೆತ್ತಿನ ದಿವಸ ಏನಾದಕ್ಕೆ ಒಳಗಾದ ವಿಷ್ಯಾತೆ, ಕಾನೂನು ಬದಲು ಮಾಡಿ, ಅದನ್ನು ಇಂಪ್ಲಿಮೆಂಟ್ ಮಾಡುವು ಕ್ಕೆ ಹೊರಟಿರುವುದು ನೋಡಿದರೆ, ನಿಜವಾಗಿಯೂ ಈ ಕಾನೂನ ಮಾಡಿ ಇನ್ವೆಷ್ಟು ವಿಚಿತ್ರವಾಗಿದೆ ಅನ್ನೋದನ್ನು ತಿಳಿಯಬೇಕು.

ಈ ಎಂದದಲ್ಲ ಪೋಲೀಸು ಸ್ವೇಷನ್ನಿಗೆ ಕಂಪ್ಲೆಂಟ್ ಕೊಟ್ಟಿರತಕ್ಕಂಥ ಒಂದು ಕೃತ್ಯ ನನ್ನ ಗಮನಕ್ಕೆ ಬಂದಿದೆ. ಇದು ಹಾಲನ ಪುಡಿ ಹಗರಣ; ಇದು ರಾಣೀಬೆನ್ನೂರಿನಲ್ಲ ನಡೆದು, ಅದರ ಸುದ್ದಿ ಬೆಳಗಾಂನಿಂದ ಬಂದಿದೆ. ರಾಣೀಬೆನ್ನೂರು ಹೆಣ್ಣು ಮಕ್ಕಳ ಶಾಲೆಯಲ್ಲಿ ಬೇರೆ ಶಾಲೆಯ ಶಿಕ್ಷಕನೊಬ್ಬನು, ಶಿಕ್ಷಕಿಯೊಬ್ಬಳನ್ನು ಬೂಡ್ಸಿನಿಂದ ಹೊಡೆದಿದ್ದಾನಂತೆ. ಪ್ರಕಟಣೆ ಕಾಪಿಯಲ್ಲ ಹೀಗಿದೆ. "ಮಕ್ಕಳ ಮಧ್ಯಾನ್ಹ ಊಪಹಾರಕ್ಕೆಂದು ಸರ್ಕಾರವು ಕೊಡುತ್ತಿರುವ ಹಾಲನ ಪುಡಿಯನ್ನು ಮಕ್ಕಳ ಬಾಯಿಹೊಡೆದು ಕಳ್ಳತನದಿಂದ ಮಾರಿದ ಹಣ ಮತ್ತು ಇತರ ಹಣವನ್ನು ಹಂಚಿಕೊಳ್ಳುವುದರಲ್ಲಿ ಬನ್ನಿಭಿಪ್ರಾಯಾಪುಂಟಾಗಿ ವೈಮನಸ್ಸು ಕಲಹವ್ಯಾಯವಾಗಿ ಬೆಳೆದು ತಾ|| -3-6 ನೇ ಮಂಗಳವಾರ ಬೆಳಗಿನ ಮಕ್ಕಳ ಪ್ರಾರ್ಥನಾ ಸಮಯದಲ್ಲಿ ದ್ಯಾವಪ್ಪ ಪೂಜಾರ, ಪಾರ್ವತವ್ವ ಮುಮ್ಮಿಗಟ್ಟಿ, ಚನ್ನವ್ವ ಮಳವಳ್ಳಿ ಈ ಮೂರು ಶಿಕ್ಷಕಿಯರು ಮಾನ ತೊರೆದು ನಗ್ನರಾಗಿ ಮಕ್ಕಳ ಎದುರಿನಲ್ಲಯೇ ಡಿದಾಡಿದರು"...

Mr. SPEAKER.—The Hon'ble member must not mention names. It is an anonymous one. I beliee that something has happened.

Sri C. J. MUCKANNAPPA.—It is not anonmous ಇದರಲ್ಲ ರುಜು ಹಾಕಿ ಕೊಟ್ಟಿದ್ದಾರೆ. ಇನ್ನೂ ಮುಂದಕ್ಕೆ ಹೇಳುತ್ತೇನೆ.

Mr. SPEAKER.—Names are imaginary. If it is not signed by anybody, do not mention it.

Sri C. J. MUCKANNAPPA.—It is signed by "ಡಿ. ಎನ್. ಭೂತೆ ಮತ್ತು ಸಂಗಡಿಗರು".

Mr. SPEAKER.—Does the Hon'ble Member take the responsibility for that signature?

Sri C. J. MUCKANNAPPA.—I am prepared to take the responsibility.

Mr SPEAKER.—Be very clear—I will take serious note of it. The Hon'ble Member is not satisfied that they are genuine signatures. How he taken care of verifying by this time.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೀವು ಏನಾದರೂ ಮಾಡಿ.

Sri ANGADI C ANNABASAPPA.—I went through the whole thing here. It has been mentioned that the complaint lodged by the concerned lady has been withdrawn. Let us not raise it on the floor of the House.

Mr. SPEAKER.—He says, better not refer to it.

ಶ್ರೀ ಸಿ. ಜೆ. ಮುಕ್ಕಣ್ಣಪ.—ಸ್ವಾಮಿ, ಇದನ್ನು ಏಕ ಹೇಳಿದನೆಂದರೆ ಹೆಣ್ಣು ಮಕ್ಕಳು ಹೊಡೆದಾಡಿದ್ದಾರೆ ಮತ್ತು ಒಬ್ಬ ಗಂಡನು ಮೇಷ್ಟ್ರು ಒಬ್ಬ ಶಿಕ್ಷಕಿಗೆ ಬೂಡ್ಸಿನಿಂದ ಹೊಡೆದು ಬಿಟ್ಟಿದ್ದಾರೆ. ಇಷ್ಟು ವಿಚಿತ್ರವಾದ ಅಧ್ಯಾನಕ್ಕೆ ವಿದ್ಯಾ ಖಾತೆ ಇಳಿದಿದೆ. ಹಾಲನಪುಡಿ ಹಗರಣದಿಂದ ಒಬ್ಬ ಹೆಣ್ಣು ಮಗಳನ್ನು ಗಂಡನು ಮೇಷ್ಟ್ರು ಬೂಡ್ಸಿನಲ್ಲಿ ಹೋಡೆದಿದ್ದಾನಂದರೆ, ಅದನ್ನು ಡರ್ಜ್ ಮಾಡಬಾರದು ಇಲ್ಲ ಅಂದರೆ ಅದನ್ನು ಇಲ್ಲಿಗೇ ಬಿಟ್ಟು ಬಿಡುತ್ತೇನೆ.

Mr. SPEAKER.—Please deal with the Bill.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನ್ನ ಕತ್ತಿ ಇರುವ ಬದಲು ಗುರಾಣಿ ಇದ್ದರೆ ಏನೋ ಮಾಡುತ್ತಿದ್ದೆ ಎನ್ನುವ ಗಾದೆಯ ಹಾಗೆ ಈ ಮಸೂದೆಯನ್ನು ತಂದಂತಿದೆ. ಇಲ್ಲಿಯವರೆಗೆ ಈ ಗಿಫ್ಟ್ ಗೂಡ್ಸಿನಲ್ಲಿ ಏನೇನೋ ನಡೆದು ಹೋಗಿದೆ, ಅದನ್ನು ಸರಿಮಾಡುವುದಕೊಸ್ಕರ ಈ ಒಂದು ಕಾನೂನು ತಂದಿರುವ ಹಾಗಿದೆ.

ಬಹಳ ಹಾಳಾಗಿ ಹೋಗಿದೆ. ಇಂಥಾ ಹಾಲನ ಡಬ್ಬ, ಬೆಣ್ಣೆ ಡಬ್ಬಗಳು ಷ್ಟೋ ಮಾಯವಾಗಿವೆ. ಅದಕ್ಕೇ ಇಂಥ ಕಾನೂನು ಬೇಕು ಎಂದು ಕಾಣುತ್ತದೆ. ಒಂದು ಪಕ್ಷ ಕಾನೂನು ಮಾಡಿ ನಿಮ್ಮ ಕೈಗೆ ಕೊಟ್ಟರೆ ಏನಾಗುತ್ತದೆ? ಕ್ಲಾಸ್ (3)ರಲ್ಲಿ Penalty for unlawful

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

possession of gift goods.—If any person is found, or is proved to have been, in possession of any gift goods reasonably suspected of being stolen or, etc,'' ಎಂದು ಇದೆ. ಒಬ್ಬ ಮೇನ್ ರು ಯಾವು ೂೀ ಒಂದ ಶಾರೆಗೆ ಕೊಟ್ಟಂಥ ವಸ್ತುವನ್ನು ತನ್ ಮನೆಯಲ್ಲಿ ಇಟ್ಟುಕೊಂಡಿರುತ್ತಾನೆ. ಅತನಿಗೆ ಬೇಡದವನು ಒಬ್ಬ ಬೆಳಿಗ್ಗೆ ಎದ್ದು ಪೋಲೀಸರಿಗೆ ದೂರು ಕೊಡ ತ್ತಾನೆ. ಕೊಟ್ಟಾಗ ಆ ಮೇಷ್ಟ್ರವನ್ನ ಡಬ್ಬ ಹೊತ್ತುಕೊಂಡು ಪೋಲೀಸ್ ಸ್ಟೇಷ್ಟಗೆ ಬಾ ಅನ್ನುತ್ತಾನೆ. ದೂರು ಕೊಟ್ಟವನ ಪರವಾಗಿ ಯಾರೋ ನಾಲ್ಕು ಜನ ಇಂಥಾಕಡೆ ಆ ಡಬ್ಬಗಳನ್ನು ಮಾರಿದ, ಇಂಥಾ ಕಡೆ ಅಡಗಿಸಿಟ್ಟ ಎಂದು ಹೇಳುತ್ತಾರೆ. ಈ ರೀತಿ ಒಬ್ಬ ಸ್ಕೂಲು ಮೇಷ್ಟ್ರರಿಗೆ ಉಪಯೋಗ ಮಾಡಿ ಎಂದು ಹೇಳಿ ಕೊಟ್ಟ ದನ್ನು ಯಾವುದಕ್ಕೆ ಹೆಗೆ ಬೇಕಾದರೂ ಲಿಂಕ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಒಂದು ಊರಿನಲ್ಲಿ ಎರಡು ಪಾರ್ಟಿ ಗಳಿದ್ದರೆ ಆ ಬಡ ಮೇಷ್ಟರಗತಿ ಏನು ? ಅವನಿಗೆ ಸಾಕ್ಷಿ ಹೇಳುವವರು ಯಾರೂ ಇರುವುದಿಲ್ಲ; ಅದಕ್ಕೇ ನಾನು ಹೇಳುವುದು ಇನ್ನು ಸ್ವಲ್ಪ ಮುಂದೆ ಹೋಗಿ ಇದು ಎಲ್ಲರಬೇಕು ! ಯಾರವತದಲ್ಲರಬೇಕು ! ಹೇಗೆ ಉಪಯೋಗವಾಗ ಬೇಕು, ಹಂಚಿಕೆ ಮಾಡುವವರು ಯಾರು, ಡಿ. ಇ. ಓ. ನೇ. ನ್ಯೂಕರ್ ಇಕ್ಸ್‌ಪೆಕ್ಟರೇ ಯಾವುದೂ ಅರ್ಥ ವಾಗ ವುದಿಲ್ಲ ಇದು ಬರೀ ಬೋಡಮ್ಮನ ಕಥೆಯಾಗಿದೆ. ತಲೆಯಲ್ಲಿ ಕೂದಲೇ ಇಲ್ಲದಿದ್ದರೆ ಹೂವು ಎತ್ತಕಡೆ ಮುಡಿದು ಕೊಳ್ಳಬೇಕು ! ಇದು ಮನಸ್ಸಿಗೆ ಅಪ್ಯಾಯ ಮಾನವಾಗಿ ಇಲ್ಲ. ಇದನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಸಾಧ್ಯವೇ, ಇಲ್ಲವೇ ಎಂಬುದು ಅನುಮಾನಕ್ಕೆ ಬಂದಿದೆ. This is a bald legislation.

Mr. SPEAKER.—A similar Bill, word for word practically has already been enacted in the neighbouring State.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಮಗೆ ಬನ್ನಹ ಮಾಡಿಕೊಳ್ಳುತ್ತೇನೆ. You gave a particular ruling. The presiding officer of the other House gave another ruling.

Mr. SPEAKER.—I asked the Chairman He says that he agrees with me. Please come to the point now.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆಂತೂ ಇದು ಒಳ್ಳೆಯದಾಗುತ್ತದೆಯೋ, ಕೆಟ್ಟದ್ದು ಆಗುತ್ತದೆಯೋ ಗೊತ್ತಿಲ್ಲ. ದಿನ ಬೆಳಿಗ್ಗೆ ಆದರೆ ಒಂದೊಂದು ಕಾನೂನು ಪಾಸ್‌ಮಾಡಿ ಸ್ಟ್ಯಾಚ್ಯೂಟ್ ಬುಕ್‌ಮೇಲೆ ಇಡುತ್ತಾ ಇದ್ದೇವೆ. ಅವನ್ನು ಇಂಪ್ಲಿಮೆಂಟ್ ಮಾಡತಕ್ಕ ರೀತಿನೀತಿಯಲ್ಲಿ ಭಯ ವುಂಟಾಗಿದೆ. ಈ ನಾಲ್ಕು ಪೇಜಿನ ಕಾನೂನನ್ನು ನಾನು ಓದಿದ್ದೇನೆ. ಇದರಿಂದ ಎಷ್ಟು ಮಟ್ಟಿಗೆ ಜನರಿಗೆ ಪ್ರಯೋಜನವಾಗುತ್ತದೆ ! ಎಷ್ಟುಮಟ್ಟಿಗೆ ಆಗುತ್ತಿರುವ ಅನ್ಯಾಯವನ್ನು ಇದರಿಂದ ತಡೆಗಟ್ಟುತ್ತಾರೆಂಬುದು ನನಗಂತೂ ಗೊತ್ತಿಲ್ಲ. ಇದು ವಿವಾದಕ್ಕೆ ಒಳಗಾಗಿರತಕ್ಕ ವಿಚಿತ್ರ ಕಥೆ. ಸರಿಯಾಗಿ ಇಂಪ್ಲಿಮೆಂಟ್ ಮಾಡುವುದನ್ನು ಅರಿತುಕೊಳ್ಳಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜಿ. ವಿ. ಗೌಡ (ಪಾಳ್ಯ).—ಮದರಾಸ್ ಮತ್ತು ಕೇರಳ ಸಂಸ್ಥಾನಗಳಲ್ಲಿ ಈರೀತಿ ಕಾನೂನು ಮಾಡಿಕೊಂಡಿದ್ದಾರೆ ಎಂಬ ಕಾರಣದ ಮೇಲೆ ಇದನ್ನು ತಂದಿದ್ದೇವೆ ಎಂದು ಹೇಳಿದ್ದೀರಿ. ಈ ವಿಧೇಯಕದಲ್ಲಿ ಅಡಕವಾಗಿರತಕ್ಕ ವಿಚಾರಗಳು ಸರ್ಕಾರದವರಿಗೆ ಪೂರ್ಣವಾಗಿ ಮನವರಿಕೆಯಾಗಿರಬೇಕು. ಈರೀತಿ ವಸ್ತುಗಳು ದುರುಪಯೋಗ ದೊಡ್ಡ ಮಟ ದಲ್ಲಿ ಆಗಿದೆ, ಅದನ್ನು ತಡೆಗಟ್ಟುವುದಕ್ಕೆ ಒಂದು ವ್ಯವಸ್ಥೆ ಇಲ್ಲ ಎನ್ನತಕ್ಕ ಪೂರ್ಣವಾದ ಮನವರಿಕೆ ಸರ್ಕಾರ ದವರಿಗೆ ಬಂದಿರುವುದರಿಂದ ಈ ಒಂದು ವಿಧೇಯಕವನ್ನು ತಂದಿದ್ದೀರಿ ಎಂದು ಅರ್ಥಮಾಡಿಕೊಳ್ಳ ಬಹುದು. ಶ್ರೀಮಾನ್ ಅಂಗಡಿ ಚನ್ನ ಬಸಪ್ಪನವರು ಹೇಳಿದ ಹಾಗೆ ಇಂಡಿಯನ್ ಪೀನಲ್ ಕೋಡಿನಲ್ಲಿ ಬೇಕಾದಷ್ಟು ಅವಕಾಶ ಏದೆ.

Supposing a person is entrusted with some goods and he misuses them. There is provision in the Indian Penal Code to punish the person.

Mr. SPEAKER.—What is the provision here ? If any person is found in possession of any goods suspected of being stolen or unlawfully obtained and he cannot account for his possession of such goods, then only he shall be punished.

Sri G.V. GOWDA.—There is already provision to take action against a person for wrongful possession of the property to which he is not legally entitled and for which he is not able to give a satisfactory explanation.

ಆದ್ದರಿಂದ ಸರ್ಕಾರದವರು ಅಂಥಾ ದುರುಪಯೋಗವಾದದ್ದು ಮನವರಿಕೆಯಾದಾಗ ಯಾವು ದಾದರೂ ಒಂದು ಅವಕಾಶ ತೆಗೆದುಕೊಂಡು ಅವರ ಮೇಲೆ ಏಕೆ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ಎನ್ನುವುದನ್ನು ಪ್ರಶ್ನೆ ಮಾಡುತ್ತಾ ಇದ್ದೇನೆ. ಪೂರ್ಣ ಮನವರಿಕೆ ಆಗವಿದ್ದರೆ ಈ ಬಿಲ್ಲು ಬರುತ್ತಲೇ ಇರಲಿಲ್ಲ. ಈ ಬಗ್ಗೆ ಸರ್ಕಾರದವರಿಗೆ ಬೇಕಾದಷ್ಟು ಮನವಿ, ಫಿರ್ಯಾದು ಅರ್ಜಿ ಬಂದು ಈ ರೀತಿ ನಡೆಯುತ್ತಾ ಇದೆ. ಯಾವುದಾದರೂ ವ್ಯವಸ್ಥೆ ಮಾಡಿಲ್ಲ, ತಡೆಗಟ್ಟುತ್ತಿಲ್ಲ ಎಂಬ ಅಭಿಪ್ರಾಯ ಒಂದ ಮೇಲೆ ಸರ್ಕಾರದವರು ಈ ಒಂದು ವಿಧೇಯಕವನ್ನು ತಂದಿದ್ದಾರೆ. ದಾನವಾಗಿ ಕೊಟ್ಟಂಥ ವಸ್ತುಗಳನ್ನು ದುರುಪಯೋಗ ಮಾಡಿದಂಥವರಿಗೆ ಶಿಕ್ಷೆ ಕೊಡುತಕ್ಕ ಉದ್ದೇಶದಿಂದ ಇದು ಕೂಡಿದೆಯೇ ಹೊರತು ದಾನವಾಗಿ ಒಂದಂಥ ವಸ್ತುಗಳನ್ನು ಯಾವರೀತಿ ವಿತರಣೆ ಮಾಡಬೇಕು, ಯಾವ ರೀತಿ ಹಂಚಬೇಕು ಎನ್ನುವುದಕ್ಕೆ ಯಾವ ಒಂದು ವ್ಯವಸ್ಥೆಯೂ ಇಲ್ಲ.

Mr. SPEAKER.—There is the definite procedure and there are conditions and it has to be complied with. It is super wide.

ಶ್ರೀ ಜಿ. ವಿ. ಗೌಡ.—ಕಂಡೀಷನ್ ಇದೆ. ಎಲ್ಲಿ ಅನಾಥಾಲಯ ಇದೆ, ಬಡವರು ಇದ್ದಾರೆ ಅಂಥವರಿಗೆ ಹಂಚಬೇಕೆಂದು ಇದೆ. ಇದು ಸಾಮಾನ್ಯವಾಗಿ ದೃಷ್ಟಿಯಿಂದ ರಾಷ್ಟ್ರದ ಎಲ್ಲಾ ಕಡೆಯಲ್ಲೂ ಹಂಚಿಕೆಯಾಗತಕ್ಕ ವ್ಯವಸ್ಥೆಯಾಗಬೇಕೆನ್ನುವುದು ನನ್ನ ಅಭಿಪ್ರಾಯ. ಇದಕ್ಕೆ ಯಾವ ರೀತಿಯ ನೀತಿ ನಿಯಮ ಸರ್ಕಾರ ಮಾಡಿಲ್ಲ. ಬೇಕಾದರೆ ಬಿಜಾಪುರ ಒಂದೇ ಜಿಲ್ಲೆಯಲ್ಲಿ ಎಲ್ಲವನ್ನು ಹಂಚಿಕೆ ಮಾಡಬಹುದು. ಧಾರವಾಡಕ್ಕೆ ಏನೂ ಕೊಡದೇ ಇರಬಹುದು. ಈ ರೀತಿ ಮಾಡುವುದಂದ ರಾಜ್ಯದಲ್ಲಿ ಎಲ್ಲಾ ಕಡೆಯಲ್ಲೂ ಸಮಾನ್ಯವಾಗಿ ಹಂಚಿಕೆಯಾಗುತ್ತದೆ ಎಂಬ ಮಾತನ್ನು ನಾನು ಒಪ್ಪುವುದಿಲ್ಲ. ಯಾವುದಾದರೂ ಒಂದು ರೀತಿ ನೀತಿ ಇದಕ್ಕೆ ಮಾಡಿಕೊಂಡಿದ್ದರೆ ನಾನು ನಿಮಗೆ ತಿಳಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ಈ ವಿಧೇಯಕದ ಮೂಲಕ ದುರುಪಯೋಗ ವಾಗುವುದನ್ನು ತಪ್ಪಿಸತಕ್ಕ ವ್ಯವಸ್ಥೆ ಜಾಗ್ರತೆ ಆಗಬೇಕೆಂದು ಹೇಳಿ ತಿಳಿಸುತ್ತಾ ಇದ್ದೇನೆ. ಮತ್ತು ಕಾಯಕ್ರಮ ತೆಗೆದುಕೊಳ್ಳುವಾಗ ಯಾರು innocent people ಇದ್ದಾರೆ ಅವರಿಗೆ ತೊಂದರೆ ಕೊಡಬಾರದು. ಅದಕ್ಕೆ ಅವಕಾಶವಾಗದಂತೆ ನೋಡಿಕೊಳ್ಳಬೇಕು. ಕೆಲವುಕಡೆ ಪ್ರೊಹಿಬಿಷನ್ ಅಫೆನ್ಸಸ್ ಆಗುತ್ತದೆ. ಯಾರೋ ಮಾಡುತ್ತಾರೆ, ಯಾರನ್ನೂ ಸಿಕ್ಕಿ ಬಿತ್ತಾರೆ. ಉಪಾಧ್ಯಾಯರ ಮೂಲಕ ಇವುಗಳನ್ನು ಹಂಚಿಕೆ ಮಾಡಿಸುವಾಗ, ಉಪಾಧ್ಯಾಯರ ಹತ್ತಿರ ಸಿಕ್ಕಿತು ಅಥವಾ ಇನ್ನೆಲ್ಲೋ ಸಿಕ್ಕಿತು ಎಂದು ಹೇಳಿ ಅವರನ್ನು ಸಿಕ್ಕಿಸತಕ್ಕ ಪರಿಸ್ಥಿತಿ ಬರಬಾರದು. ಇದು ಕಾಗ್ನಿಜಬಲ್ ಅಫೆನ್ಸಸ್ ಎಂದು ಮಾಡಿದ್ದೀರಿ. ಯಾರು ಫಿರ್ಯಾದು ಕೊಡಬೇಕೆನ್ನುವ ವಿಷಯ ಇಲ್ಲ. ಪೋಲೀಸ್‌ನವರೇ ನೇರವಾಗಿ ಅವರ ಗಮನಕ್ಕೆ ಬಂದರೆ ಕೇಸು ತೆಗೆದುಕೊಳ್ಳಬಹುದೇ ಅಥವಾ ಯಾರು ಫಿರ್ಯಾದು ಕೊಡಬೇಕು ಎನ್ನುವ ವಿಷಯ ಗೊತ್ತಾಗುತ್ತಾ ಇಲ್ಲ.

ಇದರಲ್ಲಿ ಕೊಡತಕ್ಕವನು ತೆಗೆದುಕೊಳ್ಳತಕ್ಕವನು ಇಬ್ಬರೂ ಒಂದಾಗಿ ಬಿಟ್ಟರೆ ಇದು ಯಾರಿಗೂ ಪತ್ತೆಯೇ ಆಗುವುದಿಲ್ಲ. ಈ ವಿಚಾರವನ್ನು ಇಲ್ಲಿ ಸ್ಪಷ್ಟೀಕರಣ ಮಾಡಬೇಕು. ಈ ವಿಚಾರದಲ್ಲಿ ನಾನೀಗ ಹೇಳುವುದಿಷ್ಟೇ: ಈ ಮನೂದಯನ್ನು ಕಾನೂನು ಕಡಿತಕ್ಕೆ ಕರಾರುವಾಗ ದಾನವಾಗಿ ಬಂದ ಸಾಮಾನುಗಳ ದುರುಪಯೋಗವನ್ನು ಕಡ್ಡಾಯವಾಗಿ ತಡೆಗಟ್ಟಬೇಕು. ದಾನದಿಂದ ಬಂದ ಸಾಮಾನುಗಳ ಹಂಚಿಕೆ ಸರ್ವರಿಗೂ ಒಂದು ಸಮ ರೀತಿಯಲ್ಲಿ ನಡೆಯುವಂತೆ ಮಾಡಬೇಕು. ದಾನ ಕೊಟ್ಟವರಿಗೂ ಒಂದು ಗೌರವ ಬರತಕ್ಕ ರೀತಿಯಲ್ಲಿ ನಾವು ಇದನ್ನು ವಿನಿಯೋಗ ಮಾಡಬೇಕಾದ್ದು ಅಗತ್ಯ. ಕೆಲವರು ಸಮಾಜ ಸೇವೆ ಮಾಡುತ್ತೇವೆಂದು ಇದನ್ನು ದುರುಪಯೋಗ ಮಾಡಿಕೊಳ್ಳಲು ಈಗ ಅವಕಾಶವಿದೆ. ಇದನ್ನು ಸರ್ಕಾರದವರು ಶ್ರದ್ಧೆವಹಿಸಿ ತಡೆಗಟ್ಟಬೇಕು. ಇದರ ಪೂರ್ಣ ಪ್ರಯೋಜನ ಸರ್ವರಿಗೂ ಲಭಿಸುವಂತೆ ಮಾಡತಕ್ಕ ಶಕ್ತಿ ಸರ್ಕಾರಕ್ಕಿದೆ. ಅದಕೂ ಅವರು ಶ್ರದ್ಧೆ ವಹಿಸಿ ನಡೆಸಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri V. S. PATIL.—Sir, when I read this Bill and the Statement of objects and reasons, I was at a loss to understand why such a measure has been brought by the Hon'ble Minister before the House. Or is it his idea that we should get passed several laws and pile up the statute book of the State. Why I am saying this is from a different point of view. First of all, Sir, these foods are given by certain foreign countries and some institutions and others are supplying these foods for

(SRI V. S. PATIL)

our children here. In the first place, we must feel a sort of shame amongst us that in spite of the fact of achievement of independence for the last 15-16 years, we are unable to provide our children at our own cost such good food and we have to beg and collect these things from others. This is really a very sorry thing to be observed. Our country even though it is agricultural country, we are unable to produce sufficient food for our children and for our people. This is a sorry affair from that point of view.

The second thing is that such foods are given by foreign country and to bring a special law for their equitable distribution or good use, shows that we are incapable of utilising in a better way even though the food is given. Why we should go on creating such laws. Here the most important clause is clause 3-penalty for unlawful possession of gifts—gifts reasonably suspected to be stolen. Stealing is an offence under the penal code or unlawfully obtained. This also is an offence under the penal code. When our statute books are sufficient to deal with these matters, why special laws are to be created? If the persons who are giving this food, if they come across such laws, they will feel that even though food is given by us, they are unable to utilise the food properly and to the end to which it is given. This is really a sorry affair and I do not understand why the Minister for Education is interested in creating an offence for a certain thing. The Minister for Home is there to look after any offence. Our Hon'ble Minister for Education is burdened with so many other things—I think this House has taken half the time for his Department and again he has been asked to pilot this Bill.

MR. SPEAKER.—Sri Patil is a Lawyer. Any Minister can bring any Bill under the Constitution And Education Department has done it.

SRI V. S. PATIL.—I am saying that the Education Department is too much over-burdened.

MR. SPEAKER.—He has got strength to do more.

SRI V. S. PATIL.—He is practically exhausted. Why the same man should be burdened with additional work? That is what I am hinting at, Sir.

So far as this clause 3 is concerned, I feel that such an offence is very difficult to trace these offences and secure conviction. Because, we know it is very difficult that these gifts are given by certain persons and that a person or institution distributes and ultimately, it goes to the primary schools in the villages. In this process how is it to be established that such and such a thing is unauthorised. It is very difficult. That means under this law they will have to create a number of rules and procedure and all these difficulties will again crop up; and instead of helping equitable distribution, I feel it may as well come in the way of equitable distribution. So, my friend, the Hon'ble Minister may think twice instead of burdening himself with other laws and their enforcement. He should give all these things and rely upon the good sense and moral standards of our countrymen and withdraw this Bill.

ಶ್ರೀ ಎನ್. ಆರ್. ಕಂತಿ.—ಇಷ್ಟು ಹೊತ್ತು ಮಾನ್ಯ ಸದಸ್ಯರುಗಳು ಹೇಳಿದಂಥ ಮಾತುಗಳನ್ನೆಲ್ಲ ನಾನು ಕೂಲಂಕಷವಾಗಿ ಕೇಳಿದ್ದೇನೆ. ಬಹುತೇಕ ಎಲ್ಲ ಸದಸ್ಯರೂ ನಭೆಯು ಮುಂದೆ ಮುಂಡಿಸಿರತಕ್ಕ ಮಸೂದೆಯನ್ನು ಸ್ವಾಗತ ಮಾಡಿರುತ್ತಾರೆಂದು ನಾನು ಹೇಳಬಯಸುತ್ತೇನೆ. ಈ ಪ್ರಕಾರ ಸ್ವಾಗತಿಸುವಾಗ ಕೆಲವರು ಕೆಲವು ಸೂಚನೆಗಳನ್ನು ಮಾತ್ರ ಕೊಟ್ಟಿರುತ್ತಾರೆ. ಒಬ್ಬ ಮಾನ್ಯ ಸದಸ್ಯರು ಈ ಕಾರ್ಯ ಶಿಕ್ಷಣ ಇಲಾಖೆಗೆ ಏಚಿತ್ಯವಾದದ್ದು, ಇದಕ್ಕೆ ಇಂಥಾ ಒಂದು ಅಧಿಕಾರ ಕೊಟ್ಟರೆ ಅದನ್ನು ಸರಿಯಾಗಿ ನಡೆಸಲಕ್ಕೆ ಈ ಇಲಾಖೆಗೆ ಶಕ್ತಿ ಇದೆಯೋ ಇಲ್ಲವೋ ಅನ್ನತಕ್ಕ ಒಂದು ಮಾತನ್ನು ಹೇಳಿದ್ದಾರೆ. ಆದರೆ ಈ ಮಸೂದೆ ಕಾನೂನಾದ ಮೇಲೆ ಇದು ಪೋಲೀಸಿನವರ ಕಡೆಗೆ ಹೋಗುತ್ತದೆ, ಅಷ್ಟೇ ಹೊರತು ಇದು ವಿದ್ಯಾ ಖಾತೆಯಲ್ಲಿ ಉಳಿಯುವುದಿಲ್ಲ. ಆದ್ದರಿಂದ ಇದು ವಿದ್ಯಾಖಾತೆಯವರ ಕಡೆ ಉಳಿಯುತ್ತದೆಂದು ಅವರು ತಿಳಿದುಕೊಂಡಿರುವುದು ಸರಿಯಲ್ಲ. ಇದು ಕಾನೂನಾದ ಮೇಲೆ ಇದನ್ನು ಯಾರಾದರೂ ಓದಿದರೆ ಇದರಲ್ಲಿ ಏನೊಂದು ವಿಚಾರ ಕಂಡು ಬರುತ್ತದೆಂದರೆ ಗುನ್ನೆ ಎಂತ ಒಂದು ಅಪರಾಧ ಯಾರ ಮೇಲೆ ರುಜುವಾತಾಗುತ್ತದೋ ಅದಕ್ಕೆ ಒಂದು ಶಿಕ್ಷೆಯಿರಬೇಕು ಅನ್ನುವುದನ್ನು ಇದರಲ್ಲಿ ನಮೂದಿಸಲಾಗಿದೆ.

ಇದಾದನಂತರ ಇನ್ನು ಮಿಡ್ಡೆಮೊರ್ಸ್ ಅಂದರೆ ಮಧ್ಯಾನ್ಹದ ಊಟ–ಇದನ್ನು ಯಾವ ರೀತಿ ಎಲ್ಲ ಶಾಲೆಗಳಿಗೆ ಹಂಚಬೇಕು, ಎಂಬತಕ್ಕ ವಿಚಾರದಲ್ಲಿ ಯಾವ ಮಾತನ್ನೂ ಇಲ್ಲಿ ಹೇಳಿರುವುದಿಲ್ಲ ಅಂತ ಅವರು ಹೇಳಿರುವ ಮಾತು ನರಿ. ಈ ಕಾನೂನಿನಲ್ಲಿ ಅದು ಬರುವುದಿಲ್ಲ. ಆದರೆ ಎಲ್ಲೆ ಯಾದರೂ ತಪ್ಪು ಆಚರಣೆ ಮಾಡುತ್ತಿದ್ದರೆ ಅದನ್ನು ವಿಚಾರ ಮಾಡತಕ್ಕದ್ದು ನರ್ಕಾರದವರ ಕರ್ತವ್ಯ. ಆ ವಿಚಾರಕ್ಕೆ ಈ ಕಾನೂನು ತಾಗುವುದಿಲ್ಲ. ಆದರೆ ಆ ರಾಣೆಬೆನ್ನೂರಿನಲ್ಲಿ ಹಾಗಾಯಿತು, ಹೀಗಾಯಿತು ಅಂತ ಹೇಳಿದರು, ಆದರೆ ಹಾಗೆ ಅಲ್ಲಿ ಏನಾಯಿತೋ ಏನೋ ಅದು ನನಗೆ ಗೊತ್ತಿಲ್ಲ. ಆ ವಿಚಾರವನ್ನು ನನ್ನ ಗಮನಕ್ಕೆ ತರಲಿ ನಾನು ಮಾಡುತ್ತೇನೆ. ಆದರೆ ಅಲ್ಲಿ ಏನೋ ಹಾಗೆ ನಡೆಯಿತೆಂದ ಮಾತ್ರಕ್ಕೆ ಎಲ್ಲಾ ಕಡೆಗಳಲ್ಲಿಯೂ ಹಾಗೆ ನಡೆಯುತ್ತದೆಂದು ಹೇಳುವುದಕ್ಕಾಗುವುದಿಲ್ಲ.

ಅಂಥಾದ್ದೇನಾದರೂ ಇದ್ದರೆ, ಮಾನ್ಯ ಸದಸ್ಯರು ನನ್ನ ಕಡೆಗೆ ಕೊಡುವುದಾದರೆ, ನಾನು ನೋಡಿಸುತ್ತೇನೆ. ಆದರ ಬಗ್ಗೆ ಯೋಗ್ಯವಾದ ಕ್ರಮ ತೆಗೆದುಕೊಳ್ಳುತ್ತೇನೆನ್ನುವುದಕ್ಕೆ ಏನೂ ಅನುಮಾನ ಪಡಬೇಕಾದ ಕಾರಣವಿಲ್ಲ.

5-30 P. M.

ಶ್ರೀಮತಿ ಅಂಗಡಿ ಚನ್ನಬಸಪ್ಪನವರು ಉತ್ತಮವಾದ ಸಲಹೆಗಳನ್ನೂ ಮಾಡಿದ್ದಾರೆ. ಯಾವುದೋ ಒಂದು ವ್ಯಕ್ತಿಗೆ ಯಾವುದೋ ಸಂಸ್ಥೆಯಿಂದ ಸಹಾಯ ಬಂದಿತ್ತು. ಆ ಸಹಾಯ ಸರಿಯಾಗಿ ವಿನಿಯೋಗವಾಗದೆ ಅಪವ್ಯಯವಾಗಿದೆ. ಅದಕ್ಕೆ ಸಂಬಂಧಿಸಿದಂತೆ ಈ ಕಾಯಿದೆಯಲ್ಲಿ ಯಾವ ತರಹ ನಮೂದು ಆಗಿಲ್ಲ, ಆಂಥದ್ದಕ್ಕೆ ಶಿಕ್ಷೆ ಏಧಿಸಬೇಕೆಂದು ನಮೂದಾಗಿಲ್ಲ ಎಂದು ಹೇಳಿದ್ದಾರೆ. ಆದರೆ ವ್ಯಕ್ತಿಗಳಿಗೆ ಪರದೇಶಗಳಿಂದ ಕೊಡತಕ್ಕ ಮಾಲು ಏನಿದೆ. ಅದೂ ಅಪವ್ಯಯವಾಗಬಾರದು. ಹಾಗೆ ನಡೆದಾಗ ordinary common law ಪ್ರಕಾರ ಕ್ರಮವನ್ನೂ ಚಲಾಯಿಸದೆ ಇದ್ದರೆ ನೋಡಿಸಲಕ್ಕೆ ಬರುತ್ತದೆ. ಅದರಲ್ಲಿ ತೊಂದರೆಯಾಗುವುದಿಲ್ಲ.....

Sri ANGADI CHANNABASAPPA.—Sir, there is no code prescribed by the Organisation or indicated by the Government. We find only 'not to be sold and not to be exchanged'.

Sri S. R. KANTHI.—Sir, the Hon'ble Member is talking about individuals; I am talking about the State. The agreement between the State and the CARE Organisation contains all this.

Sri ANGADI CHANNABASAPPA.—My difficulty is this. Suppose they are received by Institutions. The institutions and individuals that get the goods will not come into the purview of this Bill.

Sri S. R. KANTHI.—Individuals themeselves are not covered; that is what the member means. But, it is not the intention of the Government to cover such cases because it is a matter between the Organisation and such individuals.

(SRI S. R. KANTHI)

ಮಾನ್ಯ ಸದಸ್ಯರಿಗೆ ನಾನು ಇಷ್ಟನ್ನೂ ಮಾತ್ರ ಹೇಳಲು ಇಚ್ಛೆ ಮಾಡುತ್ತೇನೆ. ಬಂದಂಥ ಸಾಮಗ್ರಿಯನ್ನೂ ಸರಿಯಾಗಿ ಹಂಚುವ ಸಲುವಾಗಿ ಬೇರೆ ಒಂದು ವ್ಯವಸ್ಥೆಯನ್ನು ಮಾಡಬೇಕೆಂದಿದ್ದೇವೆ. ಸ್ಥಾನಿಕ ಸಂಸ್ಥೆಗಳೇನಿವೆ. ಅವುಗಳ ಮೂಲಕ ಯಶಸ್ವಿಯಾಗಿ ಇದರ ಪ್ರಯೋಜನವನ್ನೂ ಪಡೆದುಕೊಳ್ಳಬೇಕೆಂದು ಸರ್ಕಾರ ಯೋಚಿಸಿದೆ.

ಶ್ರೀ ಅಂಗಡಿ ಚನ್ನಬಸಪ್ಪ.—ಅವುಗಳಲ್ಲೆಲ್ಲ ನಿಮ್ಮ ಜನರೇ ಬಹಳವಾಗಿದ್ದಾರೆ.

ಶ್ರೀ ಎಸ್. ಆರ್. ಕಂಠಿ.—ಅವರೆಲ್ಲ ಆರಿಸಿ ಬಂದಿರುವುದರಿಂದ ಇದ್ದಾರೆ. ಅದಕ್ಕೇನು ಮಾಡುವುದು ?

Imprisonment ಮತ್ತು fine ಎರಡೂ ಇರಬೇಕು ಎಂದು ಶ್ರೀಮತಿ ಅಂಗಡಿ ಚನ್ನಬಸಪ್ಪನವರು ಹೇಳಿದ್ದಾರೆ. ಅಂಥಕಾಲ ಇನ್ನೂ ಬಂದಿಲ್ಲ. ಇಲ್ಲಿ ಅಲ್ಲಿ ಸ್ವಲ್ಪ ಸ್ವಲ್ಪ ಆಗಿದೆ. ಬೇಕಾದರೆ ಮುಂದಕ್ಕೆ ಅದನ್ನೂ ನೋಡೋಣ. ಮಕ್ಕಳ ಸಲುವಾಗಿ ಬಂದಂಥ ಊಟವನ್ನು ಯಾರಾದರೂ ಎತ್ತಿ ಹಾಕಲಿಕ್ಕೆ ಪ್ರಯತ್ನ ಮಾಡಿದರೆ ಅದನ್ನು ಬಹಳ serious ಆಗಿ ನೋಡುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಈಗ ಆ ಕಾಲ ಬಂದಿಲ್ಲ. ಬಂದಾಗ್ಗೆ ನೋಡೋಣವೆಂದು ತಿಳಿಯಪಡಿಸುತ್ತೇನೆ.

ಶ್ರೀಮತಿ ಜಿ. ಎ. ಗೌಡರು ಕೆಲವು ಮಾತನ್ನೂ ಹೇಳಿದರು. ಅದನ್ನು ನಡೆಸುವ ಕಾಲಕ್ಕೆ ಬರುವ ತೊಂದರೆಗಳನ್ನು ನಿವಾರಣೆ ಮಾಡೋಣ. ಈ ಪಾಲನ್ನು ಯಾರಾದರೂ ಶಿಷ್ಟಕರಲ್ಲ ಇಡುವ ಸಂಭವವಿಲ್ಲ. ಅದನ್ನೂ ತಾಲ್ಲೂಕು ಅಭಿವೃದ್ಧಿ ಮಂಡಳಿಗೆ ಮತ್ತು ವಿಲೇಜ್ ಪಂಚಾಯತಿಗಳಿಗೆ ಒಪ್ಪಿಸುತ್ತೇವೆ. ಆದುದರಿಂದ ಇದಕ್ಕೆ ಶಿಷ್ಟಕರು ಜವಾಬ್ದಾರಾಗುವುದಿಲ್ಲ. ಆ ರೀತಿಯ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ಎಲ್ಲ ಮಾನ ಸದಸ್ಯರಿಗೂ ನಾನು ಪುನಃ ಹೃತ್ಪೂರ್ವಕವಾದ ಅಭಿನಂದನೆಗಳನ್ನರ್ಪಿಸುತ್ತೇನೆ. ಈ ಮಸೂದೆಯನ್ನೂ ಸ್ವಾಗತ ಮಾಡಿದ್ದಕ್ಕಾಗಿ ನನಗೆ ಪರಮಾನಂದವಾಗಿದೆ. ಇವನ್ನು ಒಮ್ಮತದಿಂದ ಪಾಸ್‌ಮಾಡುತ್ತೀರೆಂದು ಭಾವಿಸುತ್ತೇನೆ.

Mr. SPEAKER.—The question is :

"The Mysore Gift Goods (unlawful possession) Bill, 1963 be taken into consideration."

The motion was adopted.

Mr. SPEAKER.—Clauses 2 to 6. The question is :

"That clauses 2 to 6, both inclusive, stand part of the Bill".

The motion was adopted.

Clauses 2 to 6, both inclusive were added to the Bill.

Mr. SPEAKER.—The question is :

"That the Schedule stand part of the Bill."

The motion was adopted.

The Schedule was added to the Bill.

Mr. SPEAKER.—Clause 1, the Title and the Preamble. The question is :

"That clause 1, the Title and the Preamble stand part of the Bill."

The motion was adopted.

Clause 1, Title and the Preamble were added to the Bill.

Motion to pass.

Sri S. R. KANTHI.—Sir, I beg to move :

"That the Mysore Gift Goods (Unlawful possession) Bill, 1963 be passed."

Mr. SPEAKER.—The question is :

"That the Mysore Gift Goods (Unlawful possession) Bill, 1963 be passed."

The motion was adopted.

The Bombay Merged Territories and Areas (Jagirs Abolition) (Mysore Amendment) Bill, 1963.

Motion to consider.

Sri M. V. KRISHNAPPA (Minister for Revenue).—Sir, I beg to move :

"That the Bombay Merged Territories and Areas (Jagirs Abolition) (Mysore Amendment) Bill, 1963, as passed by the Legislative Council be taken into consideration".

Mr. SPEAKER.—Motion moved :

"That the Bombay Merged Territories and Areas (Jagirs Abolition) (Mysore Amendment) Bill, 1963 as passed by the Legislative Council be taken into consideration."

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಾಮಿ. ಇದು ಬಹಳ ಚಿಕ್ಕದಾದ ವಿಧೇಯಕ. Bombay Merged Territiories ನಲ್ಲಿರುವ ಕೆಲವು ಜಹಗೀರುಗಳನ್ನು ತೆಗೆದುಹಾಕಲು 1954 ರಲ್ಲಿ ಒಂದು ಕಾನೂನಾಯಿತು. ಅದರ ಪ್ರಕಾರವಾಗಿ ಅಲ್ಲಿರುವ ಗೇಣಿದಾರರಿಗೆ occupancy rights ಸಿಕ್ಕ ಬೇಕಾದರೆ, ನಾಲ್ಕು ವರ್ಷದೊಳಗೆ ಹಣ ತುಂಬ ಬೇಕಾಗಿತ್ತು. ಆ ಪ್ರದೇಶಗಳು ಬಹಳ ಹಿಂದುಳಿದವು ಗಳಾಗಿದ್ದು, ಅಲ್ಲಿಯ ರೈತರೂ ಹಿಂದುಳಿದವರಾದುದರಿಂದ ಅವರು ಹಣವನ್ನು ತುಂಬುವುದಕ್ಕಾಗ ಲಿಲ್ಲ. ಕೆಲವು ಜಹಗೀರುದಾರರು ಕೋರ್ಟುಗಳಿಗೆ ಹೋಗಿ stay order ತಂದರು. ಈ ಕಾರಣ ದಿಂದಲೂ ರೈತರು ತಾವು ತುಂಬಬೇಕಾದ ಹಣವನ್ನೂ ತುಂಬುವುದಕ್ಕಾಗಲಿಲ್ಲ. ಅದಕ್ಕೆ ನಾಲ್ಕು ವರ್ಷ extension ಕೊಟ್ಟಾಯಿತು. ಆ ಕಾಲದೊಳಗಾಗಿ ರೈತರು ಹಣವನ್ನೂ ತುಂಬುವುದಕ್ಕಾ ಗಲಿಲ್ಲ. ಪುನಃ ನಾಲ್ಕು ವರ್ಷಗಳ extension ಕೊಟ್ಟರೂ ಆಗಲೂ ಹಣವನ್ನೂ ತುಂಬುವುದ ಕ್ಕಾಗಲಿಲ್ಲ. ಅವರಿಗೆ occupancy rights ದೊರೆಯಲಿ ಎನ್ನುವ ಮುಖ್ಯ ಉದ್ದೇಶದಿಂದ ಈ ವಿಧೇಯಕವನ್ನು ತಂದಿದೆ.

ಇದನ್ನು ತರುವಾಗ 22 A ಎನ್ನುವ ಒಂದು ಸೆಕ್ಷನ್ ಸೇರಿಸಿದ್ದೇವೆ. Stay order ಇರುವಾಗ ಕೆಲವು ಜಹಗೀರುದಾರರು ರೈತರಿಂದ occupancy price ಮಾತ್ರ ವಸೂಲ್ಮಾಡಬೇಕಾಗಿತ್ತು. ಅವರೆಲ್ಲ rent ವಸೂಲ್ಮಾಡಿಕೊಂಡಿದ್ದಾರೆ. ಯಾರು ಹೆಚ್ಚಿಗೆ rent ವಸೂಲ್ಮಾಡಿದ್ದಾರೆಯೋ ಅದನ್ನು ವಾಪಸು ಕೊಡಬೇಕೆಂದು ಈ ಕಲಮನ್ನು ಸೇರಿಸಿದ್ದೇವೆ. ಇದು ಕೆಲವು ಪ್ರದೇಶಗಳಿಗೆ ಮತ್ತು ಕೆಲವು ಹಳ್ಳಿಗಳಿಗೆ ಅನ್ವಯಿಸುವುದಾಗಿದೆ. ಮಾನ್ಯ ಸದಸ್ಯರು ಹೆಚ್ಚು ಕಾಲ ತೆಗೆದು ಕೊಳ್ಳದೆ ಇದಕ್ಕೆ ಅಂಗೀಕಾರ ಕೊಡುತ್ತಾರೆಂದು ನಂಬಿದ್ದೇನೆ.

Mr. SPEAKER.—The question is :

"That the Bombay Merged Territories and Areas (Jagirs Abolition) (Mysore Amendment) Bill, 1963, as passed by the Legislative Council be taken into consideration."

The motion was adopted

Mr. SPEAKER.—There are no amendments. The question is :

"Clauses 2 and 3 stand part of the Bill."

The motion was adopted.

Clauses 2 and 3 were added to the bill.